SEPTEMBER 12, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಬಾಗಲಕೋಟೆ ಜಿಲ್ಲೆಯಲ್ಲಿ, 'ಮೊಬೈಲ್ ಬಿಡಿರಿ; ಪುಸ್ತಕ ಹಿಡಿಯಿರಿ', ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ, ವಿಶೇಷ ಅಭಿಯಾನ.**

**'ಆಪರೇಷನ್ ನನ್ಹೆ ಫರಿಶ್ತೇ'; ನೈಋತ್ಯ ರೇಲ್ವೆ ಹುಬ್ಬಳ್ಳಿ ವಲಯದಿಂದ, ಆಗಸ್ಟ್ ತಿಂಗಳಲ್ಲಿ, 33 ಮಕ್ಕಳ ರಕ್ಷಣೆ.**

**ಮೇರಾ ಯುವ ಭಾರತ, 'ನಶೆ ಮುಕ್ತ ಯುವಜನತೆ'; ಬಳ್ಳಾರಿ ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ, ಚಾಲನೆ.**

**ಇಂದು, ಬೀದರ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ; ನಾಗಯ್ಯಾ ಸ್ವಾಮಿ ಹಾಗೂ ಎಸ್.ಎಂ. ಜನವಾಡ್ಕರ ಅವರಿಗೆ, ಗೌರವ ಡಾಕ್ಟರೆಟ್.**

<><><>

**ಈಗ ವಾರ್ತೆಗಳ ವಿವರ**

<><><>

**ಬಾಗಲಕೋಟೆ ಜಿಲ್ಲೆಯಲ್ಲಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ,** ಗ್ರಾಮೀಣ ಭಾಗದಲ್ಲಿ, 'ಮೊಬೈಲ್ ಬಿಡಿ–ಪುಸ್ತಕ ಹಿಡಿ' ಜಾಗೃತಿ ಅಭಿಯಾನ ಜರುಗುತ್ತಿದೆ. ಪ್ರತಿದಿನ ಸಂಜೆ 6 ರಿಂದ 8 ಗಂಟೆಯ ವರೆಗೆ ಮಕ್ಕಳು ಮೊಬೈಲ್ ಹಾಗೂ ಟಿವಿ ಬಳಕೆಯನ್ನು ಕಡಿಮೆ ಮಾಡಿ, ಓದು ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚಿನ ಸಮಯ ಮೀಸಲಿಡುವಂತೆ ಪೋಷಕರು ಹಾಗೂ ಮಕ್ಕಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಜಾನನ ಬಾಲೆ ತಿಳಿಸಿದ್ದಾರೆ. 'ವಿಷನ್ 90+' ಆನ್‌ಲೈನ್ ತರಬೇತಿಯನ್ನೂ ಸಹ ಆರಂಭಿಸಲಾಗಿದೆ ಎಂದರು.

<><><>

**‘ಆಪರೇಷನ್ ನನ್ಹೆ ಫರಿಶ್ತೇ’ ಅಡಿ,** ನೈಋತ್ಯ ರೇಲ್ವೆ ವಲಯದಲ್ಲಿ, ರೇಲ್ವೆ ರಕ್ಷಣಾ ದಳ, ಆಗಸ್ಟ್ ತಿಂಗಳಲ್ಲಿ ಒಟ್ಟು 33 ಮಕ್ಕಳನ್ನು ರಕ್ಷಿಸಿದೆ. ಆಪರೇಶನ್ ಸತರ್ಕ ಮತ್ತು ನಾರ್ಕೋಸ್ ಅಡಿ, ಅಕ್ರಮ ಮದ್ಯ ಹಾಗೂ ಮಾದಕ ವಸ್ತುಗಳ ಸಾಗಾಟಕ್ಕೂ, ರೇಲ್ವೆ ಪೊಲೀಸರು ಕಡಿವಾಣ ಹಾಕಿದ್ದಾರೆ. ನೈಋತ್ಯ ರೇಲ್ವೆ ಹುಬ್ಬಳ್ಳಿ ವಿಭಾಗದ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕನಮಡಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಮಂಜುನಾಥ ಕನಮಡಿ ಧ್ವನಿ – 43 ಸೆಕೆಂದುಗಳು**

<><><>

**ಬಳ್ಳಾರಿ ಯುವ ಭಾರತ ಕೇಂದ್ರ ಆಯೋಜಿಸಿದ್ದ, ವಿಕಸಿತ ಭಾರತಕ್ಕಾಗಿ** ‘ನಶೆ ಮುಕ್ತ ಯುವಜನತೆ’ ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಿಗೆ, ಜಿಲ್ಲಾ ಮನೋ ಆರೋಗ್ಯ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ, ಡಾಕ್ಟರ್ ವೀರೇಂದ್ರಕುಮಾರ, ಚಾಲನೆ ನೀಡಿದರು. ಬಳಿಕ ಮಾತನಾಡಿ, ಅನೇಕ ಯುವಜನರು, ಮದ್ಯ, ಮಾದಕ ಹಾಗೂ ತಂಬಾಕು ಉತ್ಪನ್ನಗಳ ವ್ಯಸನದಿಂದ, ವಯಕ್ತಿಕ, ಕುಟುಂಬದ ಹಾಗೂ ಸಮಾಜದ ಸ್ವಾಥ್ಯವನ್ನು ಹಾಳು ಮಾಡುತ್ತಿದ್ದಾರೆ. ಆಪ್ತ ಸಮಾಲೋಚನೆ ಹಾಗೂ ವ್ಯಸನ ಮುಕ್ತಿ ಚಿಕಿತ್ಸೆಯಿಂದ, ಅವರು ಮುಖ್ಯವಾಹಿನಿಗೆ ಮರಳಲು, ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

<><><>

**ಬೀದರ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ,** ಬೀದರ ಜಿಲ್ಲೆ, ಭಾಲ್ಕಿ ತಾಲೂಕು, ಹಾಲಹಳ್ಳಿಯ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದ, ಸಭಾಂಗಣದಲ್ಲಿ ಇಂದು ನಡೆಯಲಿದೆ. ಸಮಾಜ ಸೇವಕ ನಾಗಯ್ಯಾ ಸ್ವಾಮಿ ಹಾಗೂ ಸಾಹಿತಿ ಎಸ್.ಎಂ. ಜನವಾಡ್ಕರ ಅವರಿಗೆ ಗೌರವ ಡಾಕ್ಟರೆಟ್ ಪದವಿಯನ್ನು, ರಾಜ್ಯಪಾಲ ಥಾವರಚಂದ ಗೆಹ್ಲೋಟ ಹಾಗೂ ಉನ್ನತ ಶಿಕ್ಷಣ ಖಾತೆ ಸಚಿವ ಬಸವರಾಜ ರಾಯರೆಡ್ಡಿ ಪ್ರದಾನಿಸಲಿದ್ದಾರೆ. 20 ವಿದ್ಯಾರ್ಥಿಗಳಿಗೆ ವಿವಿಧ ವಿಭಾಗಗಳಲ್ಲಿ 20 ಚಿನ್ನದ ಪದಕ ಹಾಗೂ ಒಟ್ಟು 112 ವಿದ್ಯಾರ್ಥಿಗಳಿಗೆ, ಕುಲಾಧಿಪತಿ ಗೆಹ್ಲೋಟ್ ಪದವಿಗಳನ್ನು ಪ್ರದಾನಿಸಲಿದ್ದಾರೆ.

<><><>

**ಸಕ್ಕರೆ ವಲಯದಲ್ಲಿ, ಆರ್ಥಿಕ ಸುದೃಢತೆ ಖಾತ್ರಿ ಪಡಿಸಲು,** ಕೇಂದ್ರ ಸರ್ಕಾರ, ಕಬ್ಬು ಬೆಳೆಗಾರರಿಗೆ, ಕಬ್ಬಿನ ಬಾಕಿ ಹಣ ಸಕಾಲಿಕ ಪಾವತಿಗೆ ಆದ್ಯತೆ ನೀಡಿದೆ. ಪ್ರಸ್ತುತ ಶೇಕಡ 97 ರಷ್ಟು, ಕಬ್ಬು ಬಾಕಿ ಹಣ ಪಾವತಿಸಿದೆ. 2025-26ರ ಸಕ್ಕರೆ ಹಂಗಾಮಿನಲ್ಲಿ, ಆಗಸ್ಟ್ 20ರ ವೇಳೆಗೆ, ಶೇಕಡ 97ರಷ್ಟು ಕಬ್ಬಿನ ಹಣ ಪಾವತಿಸಿದೆ. ಸಕ್ಕರೆ ಕಾರ್ಖಾನೆಗಳಲ್ಲಿ ಗಮನಾರ್ಹ ಸುಧಾರಣೆ ಮತ್ತು ರೈತರಿಗೆ ಸಕಾಲಿಕ ಬಾಕಿ ಪಾವತಿಗೆ, ಯೋಜಿಸಿದೆ.

<><><>

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ರಾಜ್ಯ ಸಚಿವ ಸಂಪುಟ ಸಭೆ,** 18ನೇ ತಾರೀಖು, ಮಂಗಳೂರಿನಲ್ಲಿ ನಡೆಯಲಿದೆ. ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ, ಮಾಹಿತಿ ನೀಡಿ, ಈ ಸಭೆಯಲ್ಲಿ, ಕರಾವಳಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿ, ಮೀನುಗಾರಿಕೆ, ಪ್ರವಾಸೋದ್ಯಮ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ, ಆದ್ಯತೆ ನೀಡಿ, ಚರ್ಚಿಸಲಾಗುವುದು ಎಂದರು. ರಾಜ್ಯ ಸಚಿವ ಸಂಪುಟ ಸಭೆಯ ಹಿನ್ನೆಲೆ, ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿವಿಧ ಕ್ಷೇತ್ರಗಳ ಉದ್ಯಮಿಗಳು ಮತ್ತು ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ಬೈಕಂಪಾಡಿ ಕೈಗಾರಿಕಾ ಪ್ರದೇಶದ ರಸ್ತೆ ಅಭಿವೃದ್ಧಿಗೆ 28 ಕೋಟಿ ರೂಪಾಯಿ ಯೋಜಿತ ಪ್ರಸ್ತಾವ ಹಾಗೂ ಕೈಗಾರಿಕಾ ಪ್ರದೇಶದಲ್ಲಿ ಅಪ್ರೆಂಟಿಸ್‌ಗಳ ವಾಸ್ತವ್ಯಕ್ಕೆ ವಸತಿ ಗೃಹ ಸ್ಥಾಪಿಸಲು, ನೂತನ ಪ್ರಸ್ತಾವ ಸಲ್ಲಿಸಲು, ಸಚಿವ ಖಾದರ್ ಅಧಿಕಾರಿಗಳಿಗೆ ಸೂಚಿಸಿದರು.

<><><>

**ನೆದರ್‌ಲ್ಯಾಂಡ್ಸ್, ಜಾಗತಿಕ ಸೆಮಿಕಂಡಕ್ಟರ್** ಸಂಸ್ಥೆ, ನೆಕ್ಸ್‌ಪೀರಿಯಾ, ರಾಜ್ಯದಲ್ಲಿ ಸೆಮಿಕಂಡಕ್ಟರ್ ಮತ್ತು ಇತರೆ ಇಲೆಕ್ಟ್ರಾನಿಕ್ಸ್ ಉತ್ಪಾದನಾ ಘಟಕ ಸ್ಥಾಪಿಸಲು, ರಾಜ್ಯದಲ್ಲಿ ಹೂಡಿಕೆ ಮಾಡಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ನೆಕ್ಸ್‌ಪೀರಿಯಾ ಸಂಸ್ಥೆಯ, ಜಾಗತಿಕ ಮೈತ್ರಿ ವಿಭಾಗದ ಹಿರಿಯ ನಿರ್ದೇಶಕ ಹ್ಯಾನೆಸ್ ವ್ಯಾನ್ ರೇಮ್ಡಾಂಕ್ ಅವರನ್ನು ಭೇಟಿಯಾಗಿ, ಸಚಿವರು ಮಾತುಕತೆ ಕೈಗೊಂಡರು. ಸೆಮಿಕಂಡಕ್ಟರ್ ಮತ್ತು ಇಲೆಕ್ಟ್ರಾನಿಕ್ಸ್, ಆಹಾರ ಮತ್ತು ಪೌಷ್ಟಿಕತೆ, ಪಾನೀಯ, ಆರೋಗ್ಯ ತಂತ್ರಜ್ಞಾನ ಮತ್ತು ಜೀವ ವಿಜ್ಞಾನ, ಕೃಷಿ, ಗ್ರಾಹಕ ಉತ್ಪನ್ನಗಳು ಹಾಗೂ ಮೂಲಸೌಕರ್ಯ ಸೇರಿದಂತೆ, ವಿವಿಧ ಕ್ಷೇತ್ರಗಳ ಪ್ರಮುಖ ಕಂಪೆನಿಗಳೊಂದಿಗೆ, ಸಚಿವರು ಸರಣಿ ಸಭೆಗಳನ್ನು ನಡೆಸಿದರು.

<><><>

**ರಾಜ್ಯದ ಪ್ರಸ್ತುತ ಕೆರೆಗಳ ಸ್ಥಿತಿ,** ನೀರು ತುಂಬಿಸುವ ಸಾಧ್ಯತೆ, ಲಭ್ಯ ಜಲಮೂಲ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು, ಒಂದು ವಾರದೊಳಗೆ ಸಮಗ್ರ ವರದಿ ಸಲ್ಲಿಸುವಂತೆ, ಸಣ್ಣ ನೀರಾವರಿ, ಖಾತೆ ಸಚಿವ ಡಾಕ್ಟರ್ ಅಜಯ ಧರ್ಮಸಿಂಗ್, ಇಲಾಖೆ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಬೆಂಗಳೂರಿನಲ್ಲಿ, ಇಲಾಖೆಯ ಪ್ರಗತಿ ಪರಿಶೀಲಿಸಿ, ಮಾತನಾಡಿದ ಸಚಿವರು, ಸದ್ಯ ಕೆರೆಗಳಲ್ಲಿ ಸಂಗ್ರಹವಾಗಿರುವ ನೀರನ್ನು, ಹಿತಮಿತವಾಗಿ

ಬಳಸುವಂತೆ ಕೋರಿದರು. ರಾಜ್ಯದ ಬರ ಬಾಧಿತ ತಾಲೂಕುಗಳಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಖಾತ್ರಿಪಡಿಸಿ, ಅಂತರ್ಜಲ ಮರುಪೂರಣಕ್ಕೆ, ಏತ ನೀರಾವರಿ ಯೋಜನೆಗಳು ಹಾಗೂ ಲಭ್ಯ ನೀರಿನ ಮೂಲಗಳ ಮೂಲಕ, ಕೆರೆಗಳನ್ನು ತುಂಬಿಸಲು ಆದ್ಯತೆ ನೀಡುವಂತೆ, ನಿರ್ದೇಶಿಸಿದರು.

<><><>

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ,** ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳನ್ನು, ಒಂದೇ ಸೂರಿನಡಿ ತರುವ, 'ಒನ್ ಕರ್ನಾಟಕ ಮೊಬಿಲಿಟಿ ಆಪ್'– ಕೆ.ಎಸ್.ಆರ್.ಟಿ.ಸಿ ಅವತಾರ 2.0 ಹಾಗೂ 'ವಾಟ್ಸಾಪ್ ಟಿಕೆಟಿಂಗ್' ಸೌಲಭ್ಯ ಜಾರಿಗೊಳಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಬೆಂಗಳೂರಿನ ವಿಧಾನಸೌಧದಲ್ಲಿ, ಎರಡೂ ಸೇವೆಗಳಿಗೆ ಚಾಲನೆ ನೀಡಿದರು. KSRTC – ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, NWKRTC ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, KKRTC – ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ BMTC – ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳ ಸೇವೆಗಳು, ಒಂದೇ ಆಪ್‌ನಲ್ಲಿ ಪ್ರಯಾಣಿಕರಿಗೆ ಲಭ್ಯವಾಗಿವೆ.

<><><>

**ದೊಡ್ಡಾಟದ ಹಿರಿಯ ಮದ್ದಳೆ ಕಲಾವಿದ,** ವೀರಭದ್ರಯ್ಯ ಬೋಳಯ್ಯ ಗುರಯ್ಯನವರ, ಕುಂದಗೋಳ ತಾಲೂಕು, ಹಿರೇ ಹರಕುಣಿ ಗ್ರಾಮದಲ್ಲಿ ನಿನ್ನೆ ನಿಧನರಾಗಿದ್ದಾರೆ. ಅವರಿಗೆ 68 ವರ್ಷ ವಯಸ್ಸಾಗಿತ್ತು. ದಶಕಗಳಿಂದ, ದೊಡ್ಡಾಟ ಹಾಗೂ ಜನಪದ ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದ ವೀರಭದ್ರಯ್ಯ, ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಧಾರವಾಡ ಜಿಲ್ಲೆ, ವಿವಿಧ ವಿಧಾನಸಭಾ** ಕ್ಷೇತ್ರಗಳಲ್ಲಿ, ಸ್ಥಳೀಯ ಶಾಸಕರ ನೇತೃತ್ವದಲ್ಲಿ ಪ್ರಜಾ ಸೇವಾ ಆಂದೋಲನ ಸಭೆಯನ್ನು ಇಂದು ಆಯೋಜಿಸಲಾಗಿದೆ. ಅಳ್ನಾವರ ತಾಲೂಕು, ಪ್ರಜಾ ಸೇವಾ ಆಂದೋಲನ ಸಭೆ, ಅರವಟಗಿಯ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ ಆರಂಭವಾಗಲಿದೆ. ಕುಂದಗೋಳ ತಾಲೂಕಿನ ಸಭೆ, ಸಂಶಿಯ ವಾಲ್ಮೀಕಿ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಅಪರ ಜಿಲ್ಲಾಧಿಕಾರಿ ಸಿ.ಡಿ. ಗೀತಾ ತಿಳಿಸಿದ್ದಾರೆ. ಕಲಬುರಗಿ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ, ಪ್ರಜಾಸೇವೆ ಸಭೆ, ಇಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಇಕ್ರಂ ಷರೀಫ್ ತಿಳಿಸಿದ್ದಾರೆ. ಕೋಲಾರ ಜಿಲ್ಲೆಯ ವಿವಿಧ ಹೋಬಳಿ ಕೇಂದ್ರಗಳಲ್ಲಿ 2ನೇ 'ಪ್ರಜಾಸೇವೆ ಆಂದೋಲನ' ಸಭೆಗಳು ಆಯೋಜಿತವಾಗಿವೆ ಎಂದು ಕೋಲಾರ ಜಿಲ್ಲಾಧಿಕಾರಿ ಎಂ. ಆರ್. ರವಿಕುಮಾರ ತಿಳಿಸಿದ್ದಾರೆ.

<><><>

**ಸರ್ ಸಿದ್ದಪ್ಪ ಕಂಬಳಿ ಅವರ** ಜನ್ಮ ದಿನದ ಹಿನ್ನೆಲೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚಿಟಗುಪ್ಪಿ ಆಸ್ಪತ್ರೆ ಉದ್ಯಾನ ಆವರಣದ, ಪ್ರತಿಮೆಗೆ ಪಾಲಿಕೆ ಮಹಾಪೌರರಾದ ದುರ್ಗಮ್ಮ ಶಶಿಕಾಂತ ಬಿಜವಾಡ, ಗೌರವಾರ್ಪಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಬಾಗಲಕೋಟೆ ಜಿಲ್ಲೆಯಲ್ಲಿ, 'ಮೊಬೈಲ್** ಬಿಡಿರಿ; ಪುಸ್ತಕ ಹಿಡಿಯಿರಿ', ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ, ವಿಶೇಷ ಅಭಿಯಾನ.

**'ಆಪರೇಷನ್ ನನ್ಹೆ ಫರಿಶ್ತೇ';** ನೈಋತ್ಯ ರೇಲ್ವೆ ಹುಬ್ಬಳ್ಳಿ ವಲಯದಿಂದ, ಆಗಸ್ಟ್ ತಿಂಗಳಲ್ಲಿ, 33 ಮಕ್ಕಳ ರಕ್ಷಣೆ.

**ಮೇರಾ ಯುವ ಭಾರತ, 'ನಶೆ ಮುಕ್ತ ಯುವಜನತೆ';** ಬಳ್ಳಾರಿ ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ, ಚಾಲನೆ.

**ಇಂದು, ಬೀದರ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ;** ನಾಗಯ್ಯಾ ಸ್ವಾಮಿ ಹಾಗೂ ಎಸ್.ಎಂ. ಜನವಾಡ್ಕರ ಅವರಿಗೆ, ಗೌರವ ಡಾಕ್ಟರೆಟ್.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>